ಕಾಗದ ಪೆನ್ನು ತಂದು, ನೀನು ಹೇಳು ತಾನು ಹಿಂದಿಯಲ್ಲಿ ಬರೀತೀನಿ ಅಂದ. ಪೋಸ್ಟಿಗೆ ಹೋಗಿದೆಯೊ ಇಲ್ಲವೋ ಸಂದೇಹವಿತ್ತು. ಇದು ಹೀಗೇ ತನ್ನಿಂದ ಸಾಧ್ಯವಿಲ್ಲ ಅನಿಸತೊಡಗಿತು. ಆದರೆ, ದಾರಿ ಕಾಣುತ್ತಿಲ್ಲ. ಮನಸನ್ನು ಒತ್ತಾಯಪೂರ್ವಕ ನಿಯಂತ್ರಿಸಿಕೊಂಡು ಸಹಜವಾಗಿರತೊಡಗಿದಳು. ಸುರುವಿನಲ್ಲಿ ಅಚ್ಚರಿಯಿಂದ ಅಪನಂಬಿಕೆಯಲ್ಲಿದ್ದರೂ ಇವಳ ಹಾವಭಾವ, ರಾತ್ರಿ ಸ್ಪಂದಿಸಿ ಎಲ್ಲರೊಡನೆ ಸಹಕರಿಸುವ ಪರಿಯಿಂದ, ಆಖಿರ್ ಸಾಲಿ ರಾಸ್ತೇಪೆ ಆಗಯಿ ಅನ್ನುತ್ತ, ಮೆದುವಾಗತೊಡಗಿದರು. ಮೊದಲು ನಂಬಿದವನು ಕಿರಿಯವ. ಆಮೇಲೆ ಉಳಿದವರೂ ಕಾವಲಿನಲ್ಲಿ ಸ್ವಲ್ಪ ಉದಾರತೆ ತೋರತೊಡಗಿದರು. ಮತ್ತೆರಡು ತಿಂಗಳಾಗುವಾಗ ಪಕ್ಕದೂರಲ್ಲಿ ಅವರ ಸಂಬಂಧಿಕರದೊಂದು ಮದುವೆ ಬಂತು. ಕಿರಿಯ ತಮ್ಮನನ್ನು ಮನೆಯ ಕಾವಲಿಗಿರಿಸಿ ಬೆಳಗ್ಗೆ ತಾಯಿಯೊಂದಿಗೆ ಮೂವರೂ ಹೋದರು. ಮೈದುನ ಅಂಗಳದಲ್ಲಿ ಕಟಿಯಾದಮೇಲೆ ಅಡ್ಡಾಗಿ ಯಾವುದೋ ಹಾಡನ್ನು ಗುನುಗುತ್ತಿದ್ದ. ಇದ್ದಕ್ಕಿದ್ದಂತೆ ಅವಳಿಗನಿಸತೊಡಗಿತು. ಏನಾದರೂ ಮಾಡಿದರೆ ಈಗ ಮಾಡಬೇಕು. ತನ್ನ ಪರಿಸ್ಥಿತಿ, ಏನಾದರಾಗಲಿ ಅನ್ನುವ ಧೈರ್ಯ ತುಂಬುತ್ತ, ಮತ್ತೆ ಕಾಲಹರಣ ಮಾಡಬೇಡ ಅಂತ ಒಳಗೆಲ್ಲೋ ಎಬ್ಬಿಸುವಂತಿತ್ತು. ಕಟಿಯಾದಮೇಲೆ ಅಡ್ಡಾದವನ ಪಕ್ಕ ಕುಳಿತು ಕೂದಲಲ್ಲಿ ಬೆರಳಾಡಿಸುತ್ತ ತುಂಟ ಮಾತಾಡಿದಳು. ಮತ್ತೇರುತ್ತ ಆತ ಅವಳ ಕೈ ಹಿಡಿದುಕೊಂಡು ಶೃಂಗಾರ ಚೇಷ್ಟೆಗೆ ತೊಡಗಿ ಕಾತರನಾದ. ಒಳಗೆ ಚಾಯ್ ಕುಡಿಯೋಣವಾ ಅಂತ ಇಂಗಿತವಾಗಿ ಕೇಳಿದ. ಮತ್ತೆ ಅಂಗಳಕ್ಕೆ ಬಂದು ಆಯಾಸದಿಂದ ಕಟಿಯಾದಮೇಲೆ ನಿದ್ದೆಗೆ ಜಾರುತ್ತಿದ್ದವನಿಗೆ ಪಾಯಖಾನೆಗೆ ಹೋಗಿ ಬರುತ್ತೇನೆ ಅಂದವಳು ಸದ್ದಿಲ್ಲದೆ ಒಳಹೋಗಿ ಗಂಡಸರು ಮರದ ಪೆಟ್ಟಿಗೆಯಲ್ಲಿಡುತ್ತಿದ್ದ ನೋಟುಗಳನ್ನು ಬರಗಿ ಸೊಂಟದ ಗಂಟಲ್ಲಿ ಕುಪ್ಪುಸದಲ್ಲಿ ತುರುಕಿಕೊಂಡವಳು ಹಿಂಬಾಗಿಲಿಂದ ಉಟ್ಟಬಟ್ಟೆಯಲ್ಲಿ ಹೊರಬಿದ್ದಳು.

ಎದೆ ಸ್ಫೋಟಗೊಳ್ಳುವಂತೆ ಹೊಡೆದುಕೊಳ್ಳುತ್ತಿತ್ತು. ಸ್ಟೇಶನ್ನಿನಲ್ಲಿ ಯಾವುದೋ ರೈಲು ಹೊರಡುವ ಸ್ಥಿತಿಯಲ್ಲಿದ್ದುದು ಕಂಡಿತು. ಎಲ್ಲಿಗೆ ಹೋಗುವ ಗಾಡಿ ಗೊತ್ತಿಲ್ಲ. ಆದರೆ, ಇಷ್ಟು ಗೊತ್ತಿತ್ತು; ಜಾಸ್ತಿ ಸಮಯವಿಲ್ಲ; ಸಿಕ್ಕಿಬಿದ್ದರೆ ಪ್ರಾಣ ಉಳಿಯುವುದಿಲ್ಲ. ಟಿಕೆಟ್ಟಿಗೆ ಸಮಯವಿಲ್ಲ. ಎದುರಿನ ಬೋಗಿಯಲ್ಲಿ ನುಗ್ಗಿದಳು. ಕಿಕ್ಕಿರಿದ ಜನರಲ್ ಬೋಗಿ. ಅದು ಪ್ಯಾಸೆಂಜರ್ ಗಾಡಿಯಾಗಿತ್ತು. ತೀರಾ ನಿಧಾನ; ಹತ್ತತ್ತು ನಿಮಿಷಕ್ಕೆ ನಿಲ್ಲುತ್ತಿತ್ತು, ಸಣ್ಣಸಣ್ಣ ಊರಲ್ಲೂ ವಿರಮಿಸುತ್ತ ಅವಳ ಭೀತಿಗೆ ಸವಾಲು ಹಾಕುತ್ತಿತ್ತು. ಸಂಜೆಹೊತ್ತಿಗೆ ಟಿಟಿ ಹಿಡಿದು ಟಿಕೆಟ್ ಇಲ್ಲದ್ದಕ್ಕೆ ಒಂದೆಡೆ ಇಳಿಸಿಬಿಟ್ಟ. ಅವಳೀಗ ರಾಜಸ್ಥಾನದಲ್ಲಿದ್ದಳು. ನೇರಹಾದಿ ಗೊತ್ತಿರಲಿಲ್ಲ. ಆದರೆ, ಸ್ಟೇಶನ್‌ನಲ್ಲಿ ಕೂತಿರಬಾರದು; ರೈಲಿನಲ್ಲಿದ್ದಷ್ಟೂ ಚಲಿಸುತ್ತಿದ್ದಷ್ಟೂ ಸುರಕ್ಷಿತ. ಪಕ್ಕದ್ದು ಬಿಕಾನೇರಿಗೆ ಹೋಗುವ ಗಾಡಿ ಅಂದ ಪೋರ್ಟರು. ಟಿಕೆಟ್ ಕೊಂಡು ಕಿಕ್ಕಿರಿದ ಜನರಲ್ ಬೋಗಿಗೆ ಹತ್ತಿದಳು. ಅವಳಿಗೆ ನಲ್ಲಿಯ ನೀರು ಕುಡಿಯಲೂ ನೆನಪಾಗಲಿಲ್ಲ; ಪುರುಸೊತ್ತೂ ಇರಲಿಲ್ಲ. ಪ್ಲಾಟ್‌ಫಾರ್ಮ್ ಮೇಲೆ ಮಾರುವವರಿಂದ ಏನಾದರೂ ಕಿಟಕಿಯಿಂದಲೆ ಕೊಳ್ಳೋಣವೆಂದರೆ, ಒತ್ತಿನಿಂತ ಪ್ರಯಾಣಿಕರ ನಡುವೆ ಕುಪ್ಪುಸದಿಂದ ದುಡ್ಡು ತೆಗೆಯುವುದು, ಕಿಟಕಿವರೆಗೆ ತಲುಪುವುದು ಅಸಾಧ್ಯವೆನಿಸಿತು. ಬೆಳಗ್ಗೆ ಬಿಕಾನೇರ್ ಸ್ಟೇಶನ್ ಬಂತು. ನಲ್ಲಿ ಕಂಡವಳು ಹೋಗಿ ಬೊಗಸೆಯೊಡ್ಡಿ ನೀರು ಕುಡಿದಳು. ಬ್ರೆಡ್ಡು ಕೊಂಡು ಚಹಾದಲ್ಲದ್ದಿಕೊಂಡು ತಿಂದಳು. ನಿನ್ನೆಯಿಂದ ಏನೂ ತಿಂದು ಕುಡಿದು ಮಾಡದ್ದಕ್ಕಿರಬೇಕು ಹೊಟ್ಟೆಯಲ್ಲಿ ನೋವು ಸುರುವಾಯಿತು. ಸಮಯವಿರಲಿಲ್ಲ, ಅಲ್ಲಿ ಅಹಮದಾಬಾದಿಗೆ ಹೋಗುವ ಗಾಡಿಯಿದ್ದುದು ಕಾಣಿಸಿತು. ಕುಳಿತುಕೊಳ್ಳಲು ಸಿಕ್ಕಿತು. ಗಾಡಿ ಚಲಿಸುತ್ತಿತ್ತು. ಇದ್ದಕ್ಕಿದ್ದಂತೆ ಕುಲಬೀರ ಅವಳ ಕುತ್ತಿಗೆಗೆ ಕೈ ಹಾಕಿ ಒತ್ತಿಹಿಡಿದ. 'ಬೆಂಚೋತ್ ಓಡಿಹೋಗತಿ? ನಿನ್ನ ಇಲ್ಲೆ ತುಂಡತುಂಡ ಮಾಡತೀನಿ' ಕರ್ಕಶವಾಗಿ ನಗುತ್ತ ಚೂರಿ ಜಳಪಿಸಿ ಒತ್ತಿದ. ಕೊರೆಯುತ್ತ ಕುತ್ತಿಗೆಯಲ್ಲಿಳಿಯಿತು.